ದಿನಾಂಕ 11-02-2020ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಶ್ರೀ ಎನ್.ಆರ್. ವಕೀಲರಿಂದ

ನನ್ನ ಪ್ರಮಾಣ ಪತ್ರದಲ್ಲಿರುವ ಸಂಗತಿಗಳ ಮಾಹಿತಿ ಇರುತ್ತದೆ. ನನ್ನ ಪ್ಲಾಟ್ ನಂ. 19 ಸರ್ವೆ ನಂ. 971/1 ರಲ್ಲಿ ಬರುತ್ತದೆ. ಸಾಕ್ಷಿ ಮುಂದುವರೆದು ಸರ್ವೆ ನಂ. 971/ಎ ದಲ್ಲಿ ಬರುತ್ತದೆ ಅಂತಾ ನುಡಿಯುತ್ತಾರೆ. ಸದರಿ ಪ್ಲಾಟ್ ನಂ. 19 ನಟರಾಜ ಕಾಲೋನಿಯಲ್ಲಿ ಇರುತ್ತದೆ. ವಾದಿ ಗಂಡನಿಗೆ ಎಷ್ಟು ಜನ ಸಹೋದರರು ಇರುತ್ತಾರೆ ನನಗೆ ಗೊತ್ತಿಲ್ಲ. ಹೊನ್ನೂರ್‌ಸಾಬ್, ಹುಸೇನ್‌ಸಾಬ್ ಮತ್ತು ಖಾಜಾ ಹುಸೇನ್ ಇವರು ಸರ್ವೆ ನಂ. 971ರಲ್ಲಿ ಪ್ಲಾಟ್‌ಗಳನ್ನು ಮಾಡಿದ್ದರು ಎಂದರೆ ಸರಿ. ಸದರಿ ಪ್ಲಾಟ್‌ಗಳು ಇಂದಿರಾನಗರದಲ್ಲಿ ಬರುತ್ತವೆ ಎನ್ನುವುದು ಸರಿಯಲ್ಲ, ನಟರಾಜ ಕಾಲೋನಿಯಲ್ಲಿ ಬರುತ್ತವೆ. ದಾವಾ ಆಸ್ತಿ ಎಂದರೆ ವಾದಿಯ ಪ್ಲಾಟ್. ವಾದಿಯ ಪ್ಲಾಟ್ ನಂಬರ್ ನನಗೆ ಗೊತ್ತಿಲ್ಲ. ಅದರ ಚೆಕ್‌ಬಂದಿ ಹೇಳಲು ಬರುತ್ತದೆ. ಸದರಿ ವಾದಿಯ ಪ್ಲಾಟಿನ ದಕ್ಷಿಣಕ್ಕೆ ಗುರುರಾಜ ಇವರ ಪ್ಲಾಟ್. ನಂಬರ್ ಗೊತ್ತಿಲ್ಲ. ಪೂರ್ವಕ್ಕೆ ಗಂಗಮ್ಮನ ಪ್ಲಾಟ್. ಪಶ್ಚಿಮಕ್ಕೆ ರಸ್ತೆ, ಮತ್ತು ಉತ್ತರಕ್ಕೆ ರಸ್ತೆ ಇರುತ್ತದೆ. ನನ್ನ ಪ್ಲಾಟ್ ನಂ. 19 ವಾದಿಯ ಪ್ಲಾಟಿಗೆ ಹೊಂದಿಕೊಂಡಿಲ್ಲ, ದಾರಿಯಾದ ನಂತರ ನನ್ನ ಪ್ಲಾಟ್ ಇರುತ್ತದೆ. ನನ್ನ ಪ್ಲಾಟ್‌ನ ಸರ್ವೆ ನಂಬರ್ ಮತ್ತು ವಾದಿ ಪ್ಲಾಟ್‌ನ ಸರ್ವೆ ನಂಬರ್ ಬೇರೆ ಬೇರೆ ಇರುತ್ತದೆ. ಮೂಲ ಮಾಲೀಕರು ಮಾಡಿರುವ ಪ್ಲಾಟ್ ನಕ್ಷೆ ನೋಡಿದ್ದೇನೆ.

ವಾದಿಯ ಪ್ಲಾಟ್ ಮೊದಲು ಯಾರ ಹೆಸರಿನಲ್ಲಿ ಇತ್ತು ನನಗೆ ಗೊತ್ತಿಲ್ಲ. ವಾದಿಗೆ ಪ್ಲಾಟ್ ಯಾವ ರೀತಿ ಬಂದಿರುತ್ತದೆ ನನಗೆ ಗೊತ್ತಿಲ್ಲ. ನಿಂಗಮ್ಮ 25 ವರ್ಷದಿಂದ ಮೈಬೂಬ್ ಕಾಲೋನಿಯಲ್ಲಿ ವಾಸ ಮಾಡುತ್ತೇನೆ ಅಂತಾ ಹೇಳಿದ್ದಾಳೆ ಎಂದರೆ ಒಂದು ಪ್ಲಾಟ್ ಮೈಬೂಬ್ ಕಾಲೋನಿಯಲ್ಲಿ ಮತ್ತು ಇನ್ನೊಂದು ಪ್ಲಾಟ್ ಈ ದಾವಾ ಆಸ್ತಿಯಲ್ಲಿ ಇರುತ್ತದೆ. ನಾನು ನನ್ನ ಪ್ಲಾಟ್‌ನ್ನು ಹಟ್ಟಿ ಖಾಜಣ್ಣಿ ಇವರಿಂದ ಖರೀದಿಸಿದ್ದೇನೆ. ವಾದಿಯ ಪ್ಲಾಟ್‌ನ ಉತ್ತರ ದಿಕ್ಕಿಗೆ ಇರುವ ರಸ್ತೆ ಮುಖ್ಯ ರಸ್ತೆಗೆ ಕೂಡುತ್ತದೆ ಎಂದರೆ ಸರಿ. ವಾದಿಯ ಪ್ಲಾಟ್‌ನ ದಕ್ಷಿಣಕ್ಕೆ ಪ್ಲಾಟ್ ನಂ. 48 ಇರುತ್ತದೆ ಎನ್ನುವುದು ಸರಿ. ವಾದಿ ಯಾರ ಕಡೆಯಿಂದ ಪ್ಲಾಟ್ ಖರೀದಿಸಿದ್ದಾಳೆ ನನಗೆ ಗೊತ್ತಿಲ್ಲ. ವಾದಿಯ ಖರೀದಿ ಪತ್ರ ನಾನು ನೋಡಿಲ್ಲ ಮತ್ತು ಚೆಕ್‌ಬಂದಿ ನೋಡಿಲ್ಲ. ಪ್ಲಾಟ್ ನಂ. 40ರಲ್ಲಿ ಪ್ರತಿವಾದಿ 10X40 ಪ್ಲಾಟ್‌ನ್ನು ಹೊನ್ನೂರ್‌ಸಾಬ್, ಖಾಜಾಹುಸೇನ್ ಮತ್ತು ಹುಸೇನ್‌ಸಾಬ್ ಇವರಿಂದ ಖರೀದಿಸಿದ್ದಾನೆ ಎಂದರೆ ನನಗೆ ಗೊತ್ತಿಲ್ಲ, ಆದರೆ ಕೇಳಿದ್ದೇನೆ. ಅವರು ಖರೀದಿಸಿ 21-22 ವರ್ಷ ಆಗಿರುತ್ತದೆ ಎಂದರೆ ಇರಬಹುದು ನನಗೆ ಗೊತ್ತಿಲ್ಲ. ಸದರಿ ಪ್ಲಾಟ್ ಪ್ರತಿವಾದಿಯ ಸ್ವಾಧೀನದಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಅವರ ಹೆಸರಿಗೆ ಮುಟೇಶನ್ ಆಗಿರುತ್ತದೆ ಎಂದರೆ ಆಗಿರಬಹುದು. ಖಾತಾ ಇರುತ್ತದೆ ಎಂದರೆ ಇರಬಹುದು.

ಇದೇ ಆಸ್ತಿಗೆ ಸಂಬಂಧಪಟ್ಟಂತೆ ಪ್ರತಿವಾದಿ ಚೆನ್ನಪ್ಪ ತಂದೆ ಲಕ್ಷ್ಮಪ್ಪ ಎಂಬುವವರ ಮೇಲೆ ದಾವೆ ಹೂಡಿದ್ದ ಎನ್ನುವದು ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ವಾದಿಯ ಪ್ಲಾಟಿನ ಪಶ್ಚಿಮಕ್ಕೆ ಕಿಟಕಿ ಮತ್ತು ಬಾಗಿಲುಗಳನ್ನು ಬಿಡಬಾರದು ಅಂತಾ ರಾಜೀ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗುರುರಾಜ ಪ್ಲಾಟಿನ ಉತ್ತರಕ್ಕೆ ವಾದಿಯ ಪ್ಲಾಟ್ ನಾನು ಹೇಳುವಂತೆ ಇರುತ್ತದೆ ಎಂದರೆ ಸರಿ. ಚೆಕ್‌ಬಂದಿ ಮತ್ತು ಖರೀದಿ ವ್ಯವಹಾರದ ಬಗ್ಗೆ ನನಗೆ ಜ್ಞಾನ ಇರುತ್ತದೆ. ಸದರಿ ಗುರುರಾಜ ತನ್ನ ಪ್ಲಾಟಿನ ಉತ್ತರಕ್ಕೆ ರಸ್ತೆ ಅಂತಾ ಬರೆಸಿರುತ್ತಾನೆ ಎಂದರೆ ಬರೆಸಿರಬಹುದು ನನಗೆ ಗೊತ್ತಿಲ್ಲ. ಸದರಿ ಹೊನ್ನೂರ್‌ಸಾಬ್, ಖಾಜಾಹುಸೇನ್ ಮತ್ತು ಹುಸೇನ್‌ಸಾಬ್ ಇವರು ಬಹಳಷ್ಟು ಜನರಿಗೆ ಪ್ಲಾಟ್ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಇದೇ ಮೂರು ಜನರಿಂದ ಪ್ರತಿವಾದಿ ಪ್ಲಾಟ್ ನಂ. 40ರ ಪೈಕಿ ಪಶ್ಚಿಮ ಭಾಗದ 10X40 ಪ್ಲಾಟ್ ಖರೀದಿಸಿದ್ದಾನೆ ಎಂದರೆ ಅಲ್ಲಿ ದಾರಿ ಇರುತ್ತದೆ ಪ್ಲಾಟ್ ಇಲ್ಲ. ವಾದಿಯ ಪ್ಲಾಟಿನ ಪಶ್ಚಿಮದ ಕಡೆಗೆ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯ ಪ್ಲಾಟಿಗೆ ಹೊಂದಿಕೊಂಡು ಪ್ರತಿವಾದಿಯ ಆಸ್ತಿ ಇರುತ್ತದೆ ನಂತರ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ.

ವಾದಿಗೆ ಮತ್ತು ಪ್ರತಿವಾದಿಗೆ ದಾರಿಯ ಸಲುವಾಗಿ ಜಗಳ ಆದಾಗ ನಾನು ಇದ್ದೆ, ಆದರೆ ದಿನಾಂಕ, ವರ್ಷ ನೆನಪಿಲ್ಲ. ದಾವಾ ಆಸ್ತಿಯ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ, ವಾದಿಗೆ ಸಹಾಯ ಮಾಡಲು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. ನಿಂಗಮ್ಮನ ಪ್ಲಾಟಿನ ಪಶ್ಚಿಮಕ್ಕೆ ದಾರಿ ಇದೆ ಅಂತಾ ತೋರಿಸಲು ದಾಖಲೆ ನೋಡಿದ್ದೀರಾ ಎಂದರೆ ನೋಡಿಲ್ಲ. ಸದರಿ ದಾವಾ ಆಸ್ತಿ ದಾರಿಯಲ್ಲ, ಪ್ರತಿವಾದಿಯ ಆಸ್ತಿ ಇರುತ್ತದೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯ ಆಸ್ತಿಯ ಮೇಲೆ ವಾದಿಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡುವ ಸಲುವಾಗಿ ಮತ್ತು ಪ್ರತಿವಾದಿಗೆ ನಷ್ಟ ಉಂಟುಮಾಡಲು ಸುಳ್ಳು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ,

**ಅಪರ ಸಿವಿಲ್ ನ್ಯಾಯಾಧೀಶರು**
**ಸಿಂಧನೂರು.**